ವ್ಯವಸ್ಥೆಯನ್ನು ಏನು ಮಾಡುತ್ತೀರಿ? ಇನ್ನು ಮುಂದಾದರೂ ಅದನ್ನು ತಡೆ ಹಿಡಿಯುವುದಕ್ಕೆ, ಸಂಪೂರ್ಣವಾಗಿ ಇದನ್ನು ನಿಲ್ಲಿಸುವುದಕ್ಕೆ ವ್ಯವಸ್ಥೆಯನ್ನು ತಾವು ಏನು ಮಾಡುತ್ತೀರಿ ಎಂದು ದಯಮಾಡಿ ತಿಳಿಸಿದರೆ ನನಗೆ ಸಂತೋಷ ಎನಿಸುತ್ತದೆ.

ಅಧ್ಯಕ್ಷರು : ಎಲ್ಲ ಸಲಹೆ ಸೂಚನೆಗಳನ್ನೂ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆಂದು ಹೇಳಿ.

ಶ್ರೀ ಎ. ರಾಮದಾಸ್: ಸನ್ಮಾನ್ಯ ಅಧ್ಯಕ್ಷರೆ,....

ಅಧ್ಯಕ್ಷರು : ಮಾನ್ಯ ರಾಮದಾಸ್ ಅವರೇ, ತಾವು ಮೈಸೂರಿನ ಸದಸ್ಯರು, ತಮಗೆ ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ. ಮಾನ್ಯ ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಹೆಚ್.ವೈ. ಮೇಟಿ : ಉನ್ನತ ಅಧಿಕಾರಿಗಳ ಒಂದು ಸಮಿತಿ ಮಾಡಿ ಎನ್‌ಕ್ವೈರಿ ಮಾಡಿಸಿ ಮುಂದೆ ಹೀಗೆ ಆಗದೇ ಇರುವ ಹಾಗೆ ನೋಡಿಕೊಳ್ಳುತ್ತೇನೆ. ಇಂತಿಷ್ಟೇ ದಿವಸದಲ್ಲಿ ಹುಡುಕುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ. ಅಲ್ಲಿ 240 ಎಕರೆ ಪ್ರದೇಶ ಇದೆ.

ಅಧ್ಯಕ್ಷರು : ಆದಷ್ಟು ಬೇಗ ಎಂದು ಹೇಳಿ.

ಶ್ರೀ ಹೆಚ್.ವೈ. ಮೇಟಿ : ಪ್ರಾಮಾಣಿಕ ಪ್ರಯತ್ನ ಮಾಡಿ ಅದನ್ನು ಹುಡುಕಿಸುತ್ತೇವೆ.

ಶ್ರಿ ಎ. ರಾಮದಾಸ್ : ಪ್ರಾಣಿಗಳ ಸಾವು ಮತ್ತು ಹೆಬ್ಬಾವುಗಳು ತಪ್ಪಿಸಿಕೊಂಡ ವಿಚಾರದಲ್ಲಲಿ ನಗೆಯ ಅಲೆಯಲ್ಲಿ ನಾವು ಇದ್ದರೂ ಕೂಡ ಮಾನ್ಯ ಸಚಿವರು ಉತ್ತರ ಕೊಟ್ಟಿರುವ ರೀತಿಯಲ್ಲಿ, ಆಡಳಿತದಲ್ಲಿ ಇರುವವರು ಮತ್ತು ನೌಕರರ ಮಧ್ಯೆ ಸಂಘರ್ಷ ಏನು ಇದೆ, ಅದರಿಂದ ಪ್ರಾಣಿಗಳು ಸತ್ತಿವೆ ಎನ್ನುವುದು ಎಲ್ಲರಿಗೂ ಗೊತ್ತಿರುವಂತಹ ವಿಚಾರ. ನಾವು ಮನುಷ್ಯ ಮನುಷ್ಯರ ಮಧ್ಯೆ ಇರುವಂತಹ ಕೇವಲ ಆಡಳಿತಾತ್ಮಕವಾದ ವಿಚಾರಕ್ಕೋಸ್ಕರ ಅಲ್ಲಿ ಇರುವಂತಹ ಪ್ರಾಣಿಗಳು ಏನು ಇದ್ದಾವೆ. ಅವುಗಳು ಸಾಯುತ್ತಾ ಇರುವಂತಹದನ್ನು ನಿಲ್ಲಿಸಲಿಕ್ಕೆ ಏನು ಕ್ರಮ ಆಗಿದೆ ಎಂದು ನಮಗೆ ಅಷ್ಟೇ ಬೇಕಾಗಿದೆ.

ಶ್ರೀ ಹೆಚ್.ವೈ. ಮೇಟಿ : ಈಗಾಗಲೇ ನಾವು ಭೇಟಿ ಕೊಟ್ಟು ಈಗಾಗಲೇ ಒಬ್ಬ ಉನ್ನತ ಅಧಿಕಾರಿಯನ್ನು ನೇಮಿಸಿ ಎನ್‌ಕ್ವೈರಿ ಮಾಡಿಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಈಗಾಗಲೇ ಮೂರು ಮಂದಿಯನ್ನು ಸಸ್ಪೆಂಡ್ ಮಾಡಿದ್ದೇವೆ, ಉಳಿದವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಗುಲ್ಬರ್ಗಾ ರಾಯಚೂರು ಮತ್ತು ಬೀದರ್‌ನಲ್ಲಿ ಉರ್ದು ಶಿಕ್ಷಣ ಮಾಧ್ಯಮದ ಶಾಲೆಗಳು

227 - ಶ್ರೀ ಖಮರಲ್ಲಾ ಇಸ್ಲಾಂ (ಗುಲ್ಬರ್ಗಾ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ, ಬೀದರ್, ರಾಯಚೂರು ಜಿಲ್ಲೆಗಳನ್ನು ಹೊರತುಪಡಿಸಿ ಕರ್ನಾಟಕ ಇತರೆ ಜಿಲ್ಲೆಗಳಲ್ಲಿ ಸರ್ಕಾರಿ ಉರ್ದು ಮಾಧ್ಯಮ ಪ್ರಾಥಮಿಕ ಶಾಲೆಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಹೈದರಾಬಾದ್ ಕರ್ನಾಟಕದ ಪ್ರದೇಶದ ಈ ಮೂರು ಜಿಲ್ಲೆಗಳ ಸರ್ಕಾರಿ ಉರ್ದು ಮಾಧ್ಯಮ ಪ್ರಾಥಮಿಕ ಶಾಲೆಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಅವಕಾಶ ನೀಡದೆ ತಾರತಮ್ಯ ತೋರಿಸುತ್ತಿರುವುದಕ್ಕೆ ಕಾರಣಗಳೇನು?

ಇ) ಹಾಗಿದ್ದಲ್ಲಿ, ಸಂಬಂಧಪಟ್ಟ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಉರ್ದು ಮಾಧ್ಯಮ ಪ್ರಾಥಮಿಕ ಶಾಲೆಗಳನ್ನು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಸರ್ಕಾರ ನಿರ್ದೇಶನ ನೀಡುವುದೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು): ಅ) ಹೌದು. ಆದರೆ ಗುಲ್ಬರ್ಗ, ಬೀದರ್ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಹಿಂದಿನಿಂದಲೂ ಸಂಯುಕ್ತ ಭಾಷಾ ಶಾಲೆಗಳು ಒಂದೇ ಶಾಲೆಯಲ್ಲಿ ನಡೆಯುವ ಪದ್ಧತಿ ಇರುತ್ತದೆ.

ಆ) ಇಂತಹ ಪ್ರದೇಶಗಳಲ್ಲಿ ಹೊಸ ಶಾಲೆಗಳನ್ನು ಮಂಜೂರು ಮಾಡುವಾಗ ಪ್ರತ್ಯೇಕವಾಗಿ ಉರ್ದು ಮಾಧ್ಯಮದ ಶಾಲೆಗಳನ್ನು ಸ್ವತಂತ್ರವಾಗಿ ಕೆಲಸ ನಿರ್ವಹಿಸಲು ಅನುಮತಿ ನೀಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

SRI QAMARUL ISLAM : Sir, I ~~have~~ askedd a very specific question - Is it a fact that Gulbarga, Bidar, Raichur, in all other districts of Karnataka, Urdu Medium primary schools are functioning independently? The reply is - Yes, In Gulbarga, Bidar and Bijapur bilingual and trilingual primary schools are functioning with Urdu, Kannada & Marathi language sections. In reply you say yes and then you go on to say that they are not functioning independently. Why such an answer? I want an explanation from the Hon. Minister I would like to know what is right and whaat is wrong.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ, ಬೀದರ್ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಹಿಂದಿನಿಂದ ಮರಾಠಿ, ಕನ್ನಡ ಮತ್ತು ಇತರೆ ಭಾಷೆಗಳ ಜೊತೆಯಲ್ಲಿ ಉರ್ದು ಸ್ಕೂಲುಗಳನ್ನು ಕೊಟ್ಟಿರತಕ್ಕದ್ದು ಇದೆ. ಇತ್ತೀಚೆಗೆ ಉರ್ದು ಶಾಲೆಯನ್ನು ಆ ಪ್ರದೇಶದಲ್ಲಿ ಕೊಟ್ಟಿರತಕ್ಕದ್ದು ಇದೆ. ಹಿಂದೆ ಕೊಟ್ಟಿರತಕ್ಕದ್ದನ್ನು ನಾವು ಕಂಟಿನ್ಯೂ ಮಾಡಿಕೊಂಡು ಬಂದಿದ್ದೇವೆ. ಯಾವುದೇ ಬದಲಾವಣೆಯನ್ನು ಮಾಡಿಲ್ಲ. ಇತ್ತೀಚೆಗೆ ಆ ಪ್ರದೇಶದಲ್ಲಿ ಉರ್ದು ಶಾಲೆ ಬೇಕು ಎಂದು ಸಪರೇಟಾಗಿ ಅರ್ಜಿ ಬಂದಾಗ ಕೊಟ್ಟಿರತಕ್ಕದ್ದು ಇದೆ.

SRI KAMARUL ISLAM : Sir, in other bilingual districts like mysore, Bangalore (rural) nad (urban) etc., the urdu schools are running independently without any financial burden and there is no separate building. In the same building, with the same staff and without any Financial burden, urdu schools can function independently. When they are are functioning independently in other parts of Karnataka, why not in Gulbarga, Bidar and Bijapur. Why this discrimination? Will you issue direction to the DDPIs of Gulbarga, Bidar and Bijapur to see that urdu schools should function independently? You can appoint just one of the senior teacher as Head-Master. There is no need of appointing separate headmaster and there will not bee aany extra financial burden. It is with thee same arrangement in thee same room, same building with theee same staff pattern, the urdu schools should run independently. Will you kindly issue the direction?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಇದರ ಬಗ್ಗೆ ಸೂಕ್ತ ಆದೇಶ ಕಳಿಸುತ್ತೇನೆ.

ಅಧ್ಯಕ್ಷರು : ಅವರು ಪ್ರಶ್ನೆ ಬಹಳ ಜಾಸ್ತಿ ಹೇಳಿದರು. ಮೂರು ಜಿಲ್ಲೆಗಳ ಹೊರತಾಗಿ ಬೇರೆ ಎಲ್ಲಾ ಜಿಲ್ಲೆಗಳಲ್ಲಿ ಉರ್ದು ಮೀಡಿಯಂನಲ್ಲಿ ನಡೆಯುತ್ತಾ ಇರತಕ್ಕ ಶಾಲೆಗಳು ಪ್ರತ್ಯೇಕವಾದ ಆಸ್ತಿತ್ವ ಹೊಂದಿದೆ. ಈ ಮೂರು ಜಿಲ್ಲೆಗಳಿಗೆ ಏಕೆ ತಾರತಮ್ಯ ಮಾಡುತ್ತೀರಿ? ಈ ಮೂರು ಜಿಲ್ಲೆಗಳಲ್ಲಿ ಅಂದರೆ ಹೈದರಾಬಾದ್ ಕರ್ನಾಟಕದ ವ್ಯಾಪ್ತಿಯೊಳಗೆ ಬರತಕ್ಕ ಈ ಮೂರು ಜಿಲ್ಲೆಗಳಲ್ಲಿ ಕೂಡ ರಾಜ್ಯದ ಇತರ ಭಾಗಗಳಲ್ಲಿರತಕ್ಕ ವ್ಯವಸ್ಥೆಯನ್ನು ಜಾರಿಗೆ ತರುತ್ತೀರಾ ಎಂದು ಕೇಳುತ್ತಿದ್ದಾರೆ. ಆದೇಶ ಕೊಟ್ಟು ತರುತ್ತೇವೆ ಎಂದು ಹೇಳಿ, ಅದಕ್ಕೆ ಏನು ತೊಂದರೆ ಇದೆ?

SRI H.G. GOVINDEGOWDA : We will do it.

SRI QUAMRUL ISLAM : Will you do it from the current academic year?

SRI H.G. GOVINDEGOWDA : Yes.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ ತಮ್ಮ ಪ್ರಶ್ನೆ ಏನು ಇದೆ ಸನ್ಮಾನ್ಯ ಸಚಿವರು ಅದಕ್ಕೆ ಸ್ವಲ್ಪ ಸಮಯ ಕೇಳಿದ್ದಾರೆ. ಅದಷ್ಟು ಬೇಗ ಉತ್ತರ ತರಿಸಿಕೊಡುತ್ತೇನೆ, ಅದು ಸ್ವಲ್ಪ ವ್ಯಾಪಕವಾದ ಪ್ರಶ್ನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆ ಎಂದರೆ ಮಲೆನಾಡು ಅಭಿವೃದ್ಧಿಗೆ ಸಂಬಂಧಪಟ್ಟಂತೆ ಇನ್ನೊಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು : ವ್ಯಾಪಕವಾದ ಪ್ರಶ್ನೆ ಅದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಏನು ಆಗಿದೆ? ಬಹಳ ಪ್ರಾಮುಖ್ಯವಾದ ಸಂಗತಿಗಳು, ತಾವು ಯಾವಾಗ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ನನಗೆ ಏನು ಎಂದರೆ ಸರ್ಕಾರದಲ್ಲಿ ಇನ್‌ಫರ್ಮೇಷನ್ ಇಲ್ಲ ಎಂದರೆ ನನ್ನ ಅಭ್ಯಂತರ ಇಲ್ಲ, ಆದರೆ ನನಗೆ ಅನ್ನಿಸುತ್ತದೆ ಎಂದರೆ ಅದಲ್ಲ ಕಾರಣ. ಸುಮಾರು 175 ಲಕ್ಷ ಈ ಅಧ್ಯಕ್ಷರ ವಿವೇಚನಾ ನಿಧಿಯನ್ನು ಒಂದು ಒಂದೂವರೆ ತಿಂಗಳಲ್ಲಿ ಒಂದೇ ತಾಲ್ಲೂಕಿನಲ್ಲಿ ಖರ್ಚು ಮಾಡಿದ್ದಾರೆ, ಲೆಕ್ಕ ಕೊಡದೆ. ಈ ಪ್ರಶ್ನೆ ಕೇಳಿ ಕೇಳಿ ಸಾಕಾಗಿದೆ. ಈ ಪ್ರಶ್ನೆ ಇಲ್ಲಿ ಕೇಳಿದಾಗ ಇಲ್ಲೂ ಉತ್ತರ ಸಿಗದೇ ಇದ್ದರೆ ಇದಕ್ಕೆ ಯಾವಾಗ ಉತ್ತರ ಸಿಗುತ್ತದೆ?

ಅಧ್ಯಕ್ಷರು : ಈ ಸದನದ ಗಮನಕ್ಕೆ ಬಾರದ ರೀತಿಯಲ್ಲಿ ಪ್ರಶ್ನೆಗೆ ಉತ್ತರ ತಪ್ಪಿಸುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ, ಅಷ್ಟು ಆಶ್ವಾಸನೆಯನ್ನು ತಮಗೆ ಕೊಡುತ್ತೇನೆ. ಅವರು ಸ್ವಲ್ಪ ಸಮಯ ಕೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ಅಥವಾ ನಾಡಿದ್ದು ಅವಕಾಶ ಕೊಡುತ್ತೀರಾ?

ಅಧ್ಯಕ್ಷರು : ನಾಳೆ ಅಥವಾ ನಾಡಿದ್ದು ಅದಷ್ಟು ಬೇಗನೇ ಉತ್ತರ ತರಿಸಿಕೊಡೋಣ.

ಕೋರಮಂಗಲದಲ್ಲಿ ಒಳಾಂಗಣ ಕ್ರೀಡಾಂಗಣದ ನಿರ್ಮಾಣ

171 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?